ಈ) ೧) ವಿಕ್ಟೋರಿಯ ಆಸ್ಪತ್ರೆ : ನೆಲಮಾಳಿಗೆಯ ಕಟ್ಟಡದ ಕೆಲಸ ಮುಗಿದಿದ್ದು ಉಳಿದ ಕೆಲಸಗಳು ನಡೆಯುತ್ತಾ ಇದೆ.

೨) ವಾಣಿ ವಿಲಾಸ ಆಸ್ಪತ್ರೆ : ನೆಲಮಹಡಿ ಮತ್ತು ಮೊದಲನೇ ಅಂತಸ್ತಿನ ಎಲ್ಲ ಕೆಲಸಗಳು ಮುಗಿದಿದ್ದು, ಆಸ್ಪತ್ರೆ ಅಧಿಕಾರಿಗಳಿಗೆ ಬಿಟ್ಟು ಕೊಡಲಾಗಿದೆ. ಎರಡನೇ ಮಹಡಿ ಕೆಲಸಗಳು ಮುಕ್ತಾಯ ಹಂತದಲ್ಲಿದೆ.

ಉ) ಮೊದಲಿನ ಹಂತದ ಕೆಲಸಗಳಿಗೆ ೧೧೬೦ ಲಕ್ಷ ರೂ.ಗಳ ಅಂದಾಜು ಮಾಡಲಾಗಿದೆ.

ಪ್ರಶ್ನೆ ಸಂಖ್ಯೆ ೧೨೯ (೩೫೨) ಶ್ರೀ ಕೆ.ಬಿ. ಮಲ್ಲಪ್ಪ (ಮಾನ್ಯ ಸದಸ್ಯರು ಗೈರು ಹಾಜರಾಗಿದ್ದರು)

ಶ್ರೀ ಕೆ.ಜೆ. ಜಾರ್ಜ್. ಮಾನ್ಯ ಅಧ್ಯಕ್ಷರೇ, ಇಷ್ಟು ದೊಡ್ಡ ಕೆಲಸವನ್ನು ಎಸ್ಟಿಮೇಟ್, ಕಾಸ್ಟ್, ಮಂಜೂರಾಗಿತ್ತೆ ಪ್ರಾರಂಭ ಮಾಡಿದ್ದಾರೆಯೇ ? ಮತ್ತು ಮೊದಲನೆಯ ಪ್ಲಾನ್ ಪ್ರಕಾರ ಎಷ್ಟು ಫ್ಲೋರ್ ಕಟ್ಟುವ ಅಂದಾಜು ಇತ್ತು. ಈಗ ೧೧ ಕೋಟಿ ೬೦ ಲಕ್ಷ ರೂಪಾಯಿನಲ್ಲಿ ಎಷ್ಟು ಫ್ಲೋರ್ ಕಟ್ಟುತ್ತಿದ್ದಾರೆ ಎನ್ನುವುದನ್ನು ಹೇಳಬೇಕು.

ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯ ಅಧ್ಯಕ್ಷರೇ, ಇದು ಎಸ್ಟಿಮೇಟ್ ಆಗದೇ ಕೆಲಸ ಶುರುವಾಯಿತು. ಇದಕ್ಕೆ ಒಂದು ಮಾಸ್ಟರ್ ಪ್ಲಾನ್ ಮಾಡಿದರು. ಮಾಸ್ಟರ್ ಪ್ಲಾನ್ ಏಂದು ಮಾಡಿ, ಎಸ್ಟಿಮೇಟ್ ಮತ್ತೊಂದು ಮಾಡಿಕೊಂಡರು. ಆದರೆ ಡೀಟೇಲ್ ಎಸ್ಟ್ಮೇಟ್ ಮಾಡಲಿಲ್ಲ. ಈ ಮಾಸ್ಟರ್ ಪ್ಲಾನ್‌ಗೆ ನಾನು ಅವಿಗಲ್ಲು ಹಾಕಿದ್ದೇನೆ. ಈ ರೀತಿ ಹೇಳಿದರೆ ನಾನು ಆರೋಪಣೆ ಮಾಡುತ್ತಿದ್ದೇನೆಂದು ಯಾರೂ ತಿಳಿದುಕೊಳ್ಳಬಾರದು. ಇದು ಮಾಸ್ಟರ್‌ವಾಂಶ ಈ ಮಾಸ್ಟರ್ ಪ್ಲಾನನ್ನು ೧೪-೪-೮೧ ರಲ್ಲಿ ತಯಾರು ಮಾಡಿದ್ದಾರೆ. ಇದು ಆದ ಮೇಲೆ ಈಗ ಇದಕ್ಕೆ ಮಂಜೂರಾತಿ ಕೊಡಬೇಕೆಂದರೆ ೨೫-೩೦ ಕೋಟಿ ರೂಪಾಯಿಗಳಾಗುತ್ತವೆ. ಆದುದರಿಂದ ಇದಕ್ಕೆ ಕೈಹಾಕುವುದಕ್ಕೆ ಹೋಗಿಲ್ಲ. ನಮ್ಮ ಬಜೆಟ್‌ನ್ನು ಗಮನದಲ್ಲಿ ಇಟ್ಟುಕೊಂಡು ಮಾಸ್ಟರ್ ಪ್ಲಾನ್ ಮಾಡಬೇಕೆಂದು ತೀರ್ಮಾನ ಮಾಡಿದ್ದೇವೆ. ನಾವು ಯೋಜನೆ ಮಾಡಿರತಕ್ಕದ್ದು ಹಣಕಾಸಿನ ಪರಿಸ್ಥಿತಿಗೆ ಹೊಂದಿಕೆಯಾಗುವಂತಹದ್ದು. ಇದು ಡಿಲೇ ಆಗಿದ್ದರೆ ಇದಕ್ಕೆ ಕಾರಣ ಹಿಂದೆ ಏನು ತೀರ್ಮಾನ ಮಾಡಿದ್ದರು, ಅದರ ಪ್ರಕಾರ ಇದಕ್ಕೆ ೩೦ ಕೋಟಿ ರೂಪಾಯಿ ಕೊಡುವುದಕ್ಕೆ ಶಕ್ತಿ ಇಲ್ಲ. ಅದಕ್ಕೋಸ್ಕರ ಏನು ಮಾಡಿದ್ದೇವೆ, ವಿಕ್ಟೋರಿಯಾ ಹಾಸ್ಪಿಟಲ್‌ನಲ್ಲಿ ಬೇಸ್‌ಮೆಂಟ್, ಗ್ರೌಂಡ್ ಮತ್ತು ಫಸ್ಟ್ ಫ್ಲೋರ್‌ಗೆ ೮.೫೫ ಕೋಟಿ. ಹಾಗೂ ವಾಣಿ ವಿಲಾಸ ಹಾಸ್ಪಿಟಲ್‌ನ ಸರ್ಜಿಕಲ್ ಬ್ಲಾಕ್‌ಗೆ ೩ ೧೦ ಕೋಟಿ, ಒಟ್ಟು ೧೧ ಕೋಟಿ ೬೦ ಲಕ್ಷ ರೂಪಾಯಿ ಖರ್ಚು ಮಾಡಬೇಕೆಂದು ಹೇಳಿ. ಆರ್ಕಿಟೆಕ್ಟ್ ಇತ್ಯಾದಿ ಪ್ರತಿಯೊಂದು ಫಾರ್ಮಾಲಿಟಿ ಏನು ಆಗಬೇಕಾಗಿದೆ ಅದನ್ನು ಮುಗಿಸಿ, ಅದಕ್ಕೆ ಮಂಜೂರಾತಿ ಕೊಡುವ ಹಂತದಲ್ಲಿದೆ. ಇಲ್ಲಿಯವರೆಗೆ ಇದಕ್ಕಾಗಿ ೩೫೧.೧೪ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ.

ಶ್ರೀ ಕೆ.ಜೆ. ಜಾರ್ಜ್. ಮಾನ್ಯ ಅಧ್ಯಕ್ಷರೇ, ಈ ಗೌರ್ನಮೆಂಟ್ ಆರ್ಡರ್ ಕಾಪಿ ಕೊಡುತ್ತೀರಾ ? ಜಿ.ಒ. ನಂಬರ್ ಹೆಚ್.ಎಫ್.ಡಬ್ಲ್ಯೂ ೯೮ ಬಿ.ಆರ್.ಎ ೮೦ ದಿನಾಂಕ ೧೩-೪-೮೧ರ ಸರ್ಕಾರಿ ಆಜ್ಞೆಯ ಒಂದು ಕಾಪಿಯನ್ನು ತಾವು ಕೊಟ್ಟರೆ ಚೆನ್ನಾಗಿರುತ್ತದೆ.

ಶ್ರೀ ಹೆಚ್.ಡಿ. ದೇವೇಗೌಡ. ಅದರೊಳಗೆ ಏನೂ ಇಲ್ಲ, ಕೆಲಸ ಶುರು ಮಾಡಿ ಎಂದು ಒಂದು ಜಿ.ಒ. ಮಾಡಿದ್ದಾರೆ. ಮಾಸ್ಟರ್ ಪ್ಲಾನ್‌ಗೆ ಹೊಂದಿಕೊಳ್ಳುವ ಹಾಗೆ ಕೆಲಸ ಶುರು ಮಾಡಿ ಎಂದು ಹೇಳಿದ್ದಾರೆ. ಅದು ಪಬ್ಲಿಕ್ ಡಾಕ್ಯುಮೆಂಟ್.

ಶಿವಮೊಗ್ಗ ಜಿಲ್ಲೆಗೆ ತುಂಬಾ ಕೆಳಮಟ್ಟದ ಏತ ನೀರಾವರಿ ಯೋಜನೆಯಿಂದ ಒದಗಿಸಲಾದ ಸೌಲಭ್ಯಗಳು

೧೩೧(೨೧೪) ಕೆ.ಹೆಚ್. ಶ್ರೀನಿವಾಸ್(ಶಿವಮೊಗ್ಗ).—ಮಾನ್ಯ ಲೋಕೋಪಯೋಗಿ ಜಲಾಯನ ಪ್ರದೇಶಾಭಿವೃದ್ಧಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ೧೯೮೬-೮೭ ಆಯವ್ಯಯದಲ್ಲಿ ಶಿವಮೊಗ್ಗದ ತುಂಬಾ ಕೆಳಮಟ್ಟದ ಏತನೀರಾವರಿ ಯೋಜನೆ ಸೇರಿರುವುದು ನಿಜವಲ್ಲವೇ ?

ಅ) ಸದರಿ ಯೋಜನೆಯಿಂದ ನೀರಾವರಿ ಸೌಲಭ್ಯ ಪಡೆಯುವ ಗ್ರಾಮಗಳು ಯಾವುವು ಹಾಗೂ ಭೂ ವಿಸ್ತೀರ್ಣವೆಷ್ಟು ?

ಇ) ಸದರಿ ಯೋಜನೆ ಬಗ್ಗೆ ನೂತನ ಸಮೀಕ್ಷೆ ಏನಾದರೂ ನಡೆದಿದೆಯೇ ?

ಈ ಸದರಿ ಯೋಜನೆಯಿಂದ ಶಿವಮೊಗ್ಗ ತಾಲ್ಲೂಕಿನಲ್ಲಿ ಶಾಶ್ವತ ಬರಗಾಲಕ್ಕೆ ತುತ್ತಾಗಿರುವ ಗ್ರಾಮಗಳಿಗೆ ನೀರಾವರಿ ಸೌಲಭ್ಯ ಒದಗುವುದು ನಿಜವಲ್ಲವೇ ?

ಉ) ಸದರಿ ಯೋಜನೆಯನ್ನು ಶೀಘ್ರವಾಗಿ ಕಾರ್ಯಗತಗೊಳಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರೇ ?

ಶ್ರೀ ಹೆಚ್.ಡಿ. ದೇವೇಗೌಡ(ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).— ಅ) ಹೌದು ಹೈಮ್ಯಾಗ್ನಿಟ್ಯೂಡ್ ಯೋಜನೆಗಳ ಪಟ್ಟಿಯಲ್ಲಿ ಸೇರಿರುತ್ತದೆ.

ಆ) (೧) ಹೊಸಕೊಪ್ಪ, ಯೀಚವಾಡಿ, ಬಸಾಪುರ ರಾಮನಕೊಪ್ಪ, ಅಗಸವಲ್ಲಿ, ಅರಕೆರೆ, ಕಲ್ಲೂರು, ಗೋವಿಂದಪುರ, ಅನುಪಿನಕಟ್ಟೆ, ಉಡ್ಡಿ, ಗೋಪಸಕಟ್ಟೆಕೊಪ್ಪ, ಗಾಡಿಕೊಪ್ಪ, ಗೋಪಾಲ್ ಆಲಿಕೊಳ್ಳ, ಕಾಸಿಪುರೆ, ಕಲ್ಲಹಳ್ಳಿ, ಬೊಪ್ಪನಕಟ್ಟೆ, ಸೋಮನಕೊಪ್ಪ, ಬಸಪನ ಗಂಗೂರ್ ಚಿನ್ನ ಭುನಿಬಾವುರ್, ಅಬುಲಿಗೆರೆ, ತಿಮಕಾಪುರ ನಾಲೆ. ಕೋಟೆಬೆನೂರು, ಸಟ್ಟಾಡ್, ಬೈರನಕೊಪ್ಪ, ಬೋಳಿಕೊಪ್ಪ, ಗಾಜನೂರು, ಗೆಜ್ಜನಹಳ್ಳಿ, ಸಕ್ಕರೇಬೈಲು ಮಲಗೆ ನಹಳ್ಳಿ.

(೨) ನೀರಾವರಿ ಸೌಲಭ್ಯ ಪಡೆಯುವ ಭೂ ವಿಸ್ತೀರ್ಣ ೫೦೦೦ ಎಕರೆಗಳು.

ಇ) ಇಲ್ಲ.

ಈ) ನಿಜ.

ಉ) ಈ ಯೋಜನೆಯ ಆಚ್ಚುಕಟ್ಟು ಅನ್ವೇಷಣಾ ಹಂತದಲ್ಲಿರುವ ತುಂಗಾ ಮೇಲ್ದಂಡೆ ಯೋಜನೆಯ ಆಚ್ಚುಕಟ್ಟಿನಲ್ಲಿ ಬರುವುದರಿಂದ ಈ ಅನ್ವೇಷಣೆಗಳು ಮುಗಿದ ನಂತರ ಈ ಯೋಜನೆಯ ಬಗ್ಗೆ ಅಂತಿಮ ತೀರ್ಮಾನ ತೆಗೆದುಕೊಳ್ಳಲಾಗುತ್ತದೆ.

ಶ್ರೀ ಕೆ.ಹೆಚ್. ಶ್ರೀನಿವಾಸ್.— ಮಾನ್ಯ ಅಧ್ಯಕ್ಷರೇ, ಈ ತುಂಗಾ ಕೆಳಮಟ್ಟದ ಏತನೀರಾವರಿ ಯೋಜನೆಯಿಂದ ಶಿವಮೊಗ್ಗ ತಾಲ್ಲೂಕಿನಲ್ಲಿ ಶಾಶ್ವತ ಬರಗಾಲಕ್ಕೆ ತುತ್ತಾಗಿರುವ ಗ್ರಾಮಗಳಿಗೆ ನೀರಾವರಿ ಸೌಲಭ್ಯ ಒದಗುವುದು ನಿಜವಲ್ಲವೇ ಎಂದು ಕೇಳಿರುವುದಕ್ಕೆ ಮಾನ್ಯ ಮಂತ್ರಿಗಳು ಹೌದು ಎಂದು ಒಪ್ಪಿಕೊಂಡಿದ್ದಾರೆ. ಇದು ಈಗ ಎರಡನೇ ಬಾರಿಗೆ ಆಯವ್ಯಯದಲ್ಲಿ ಸೇರಿರತಕ್ಕಂತದ್ದು, ಹಿಂದೊಮ್ಮೆ ಸೇರಿತ್ತು. ತನ್ಮಧ್ಯೆ ಮತ್ತೆ ಕೈಬಿಟ್ಟು ಈಗ ಹೊಸದಾಗಿ ಮಾನ್ಯ ಮಂತ್ರಿಗಳಿಗೆ ಇದನ್ನು ಆಯವ್ಯಯದಲ್ಲಿ ಸೇರಿಸಿದ್ದಾರೆ. ಇದಕ್ಕಾಗಿ ನಾವು ಕೃತಜ್ಞರಾಗಿದ್ದೇವೆ. ಆದರೆ ಈ ಹೈಮ್ಯಾಗ್ನಿಟೂಡ್ ಯೋಜನೆ ಎಂದರೆ ಏನು ಸ್ವಷ್ಟವಾಗಿ ನನಗೆ ಗೊತ್ತಿಲ್ಲ. ಇದರ ಬಗ್ಗೆ ಮಾನ್ಯ ಮಂತ್ರಿಗಳ ವಿವರಣೆ ಕೇಳುವುದಕ್ಕೆ ಬಯಸುತ್ತೇನೆ. ತುಂಗಾ ಮೇಲ್ದಂಡೆ ಯೋಜನೆ, ನೆನೆಗುದಿಗೆ ಬಿದ್ದಿರತಕ್ಕಂಥ ಯೋಜನೆ. ಇದರಲ್ಲಿ ವಿಪರೀತ ಮುಳುಗಡೆ ಪ್ರಶ್ನೆ ಇದೆ. ಮತ್ತೊಂದು ಇದೆ. ಬಚಾವತ್ ಅವಾರ್ಡ್ ಪ್ರಕಾರ ಕೃಷ್ಣಾನದಿ ನೀರಿನ ಹಂಚಿಕೆಯ ಪ್ರಶ್ನೆಯೂ ಬರುತ್ತದೆ. ಸದ್ಯಕ್ಕಂತೂ ಈ ಯೋಜನೆ ಕಾರ್ಯಗತ ಆಗತಕ್ಕಂತ ಸಂಭವ ಇಲ್ಲ. ಬಹಳ ಕಡಿಮೆ. ಆದನ್ನು ಕಾರ್ಯಗತ ಕೊಂಡು ಐದುಸಾವಿರ ಎಕರೆ ಜಮೀನು ಒಣಗುತ್ತಿರಬೇಕೆಂದರೆ, ಅಷ್ಟು ಹೊತ್ತಿಗೆ ಎಷ್ಟೋ ನೀರು ಸಮುದ್ರ ಪಾತಳಿಗೆ ಹರಿದು ಹೋಗುತ್ತದೆ. ಅದುದರಿಂದ ಈ ನೀರನ್ನು ಬಳಕೆ ಮಾಡುವುದಕ್ಕೆ ಈ ಸಣ್ಣ ಲೋ ಲೆವೆಲ್ ಲಿಫ್ಟ್ ಇರಿಗೇಷನ್ ಕೈಗೊಳ್ಳುವಂತಾದ್ದು ಸಮಂಜಸ ಅಲ್ಲವೇ ದಯವಿಟ್ಟು ತಾವು ಇದನ್ನು ಈ ಪರ್ಷ ಪ್ರಾರಂಭ ಮಾಡಿದರೆ ಅನುಕೂಲ ಆಗುತ್ತದೆ ಸರ್ಕಾರ ಮನಸ್ಸು ಮಾಡಿದರೆ ಇದು ಸಾಧ್ಯ ಇದೆ. ಇದನ್ನು ಮಾಡುತ್ತೀರಾ ಎಂದು ಕೇಳುವುದಕ್ಕೆ ಬಯಸುತ್ತೇನೆ.

ಶ್ರೀ ಹೆಚ್.ಡಿ. ದೇವೆ ಗೌಡ.— ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳಿದ ಪ್ರಕಾರ ಯೋಜನೆಯನ್ನು ಬಜೆಟ್‌ನಲ್ಲಿ ಸೇರಿಸಿದ್ದೆವು. ಆ ಮೇಲೆ ಕೈಬಿಡಲಾಗಿತ್ತು., ತದನಂತರವೆ ಈ ಸದಸ್ಯರ ಒತ್ತಾಯದ ಮೇರೆಗೆ ಈ ಯೋಜನೆಯನ್ನು ಬಜೆಟ್‌ನಲ್ಲಿ ಸೇರಿಸಲಾಯಿತು. ಈಗ ನಾವು ಲಿಫ್ಟ್ ಇರಿಗೇಷನ್ ಕಾರ್ಪೊರೇಷನ್ ಮಾಡತಕ್ಕಂಥ ಉದ್ದೇಶವಾದರೂ ಏನೆಂದರೆ ಇಂತಹ ಯೋಜನೆಗಳಿಗೆ ಸಂಬಂಧಪಟ್ಟ ಹಣವನ್ನು ಅಥವಾ ಸಂಪನ್ಮೂಲಗಳನ್ನು ರೂಡಿಸಿಕೊಳ್ಳಲು ಅನುಕೂಲ ವಾಗುತ್ತದೆ. ಅಂದರೆ ಗವರ್ನ್‌ಮೆಂಟ್ ವಿಶ್ವಬ್ಯಾಂಕುಗಳ ಮೂಲಕ. ಈಗ ಕೆಲಸ ಪ್ರಾರಂಭ ಮಾಡುವುದಕ್ಕಿಂತ ಮುಂಚಿತವಾಗಿ ೩-೪ ಕೋಟಿ ರೂಪಾಯಿಗಳನ್ನು ಇಟ್ಟುಕೊಂಡು ಏನು ಮಾಡುವುದಕ್ಕೆ

ಆಗುತ್ತದೆ ? ಈಗ ವಿಂಡಿಯಂ ಟ್ರೈಂ ಲಿಫ್ಟ್ ಇರಿಗೇಷನ್‌ಗೆಂದು ಸುಮಾರು ೪೨ ಕೋಟಿ ರೂಪಾಯಿ ಗಳನ್ನು ಇಟ್ಟಿದ್ದೆವು. ಅದು ಪೂರ್ಣವಾಗುವುದಿಲ್ಲ. ಇಂತಹ ಯೋಜನೆಗಳಿಗೆ ಬಡ್ಜೆಟ್‌ನಲ್ಲಿ ಟೋಕನ್ ಗ್ರಾಂಟ್ ಇಟ್ಟು ಲಿಫ್ಟ್ ಇರಿಗೇಷನ್ ಕಾರ್ಪೊರೇಷನ್ ಮುಖಾಂತರ ಹಣ ರೂಡಿಸಿಕೊಳ್ಳುವುದಕ್ಕೆ ಅನು ಕೂಲವಾಗುತ್ತದೆ. ಆದ್ದರಿಂದ ನಾವು ಈ ಯೋಜನೆಯನ್ನು ಪಟ್ಟಿಯಲ್ಲಿ ಸೇರಿಸಿದ್ದೇವೆಂದು ಉತ್ತರ ಹೇಳಿದ್ದೇನೆ. ಇನ್ನು ಮಾನ್ಯ ಸದಸ್ಯರು ಮಾತನಾಡುತ್ತಾ ಹೇಳಿದರು ಹೈ ಮ್ಯಾಗ್ನಿಟ್ಯೂಡ್ ವರ್ಕ್ ಎಂದರೆ ಅರ್ಥ ಗೊತ್ತಿಲ್ಲವೆಂದು. ಇಂತಹ ಕಾರ್ಪೊರೇಷನ್ ಮುಖಾಂತರ ಸಂಪನ್ಮೂಲಗಳನ್ನು ರೂಡಿಸಿಕೊಳ್ಳುವ ದೃಷ್ಟಿಯಿಂದ ಆ ಪದವನ್ನು ಉಪಯೋಗಿಸಲಾಗಿದೆ. ಈ ಯೋಜನೆಗೆ ಮುಖ್ಯ ವಾಗಿ ನಮಗೆ ಸಂಪನ್ಮೂಲಗಳ ಕೊರತೆಯಿಂದ ಡಿಲೇ ಆಗಿದೆ. ಲಿಫ್ಟ್ ಇರಿಗೇಷನ್ ಕಾರ್ಪೊರೇಷನ್ ನಿಯಮಗಳ ಪ್ರಕಾರ ರಿಜಿಸ್ಟರ್ ಮಾಡಿಸಿರಬೇಕು. ಅದಕ್ಕೆ ಸಂಬಂಧಪಟ್ಟ ಬೈಲಾ ಮಾಡಬೇಕು. ಗೌರ್ನಮೆಂಟ್ ಆಫ್ ಇಂಡಿಯಾ ಪರ್ಮಿಷನ್ ಪಡೆದುಕೊಳ್ಳಬೇಕು ಈ ಎಲ್ಲಾ ಕಾರಣಗಳಿಂದ ಸ್ವಲ್ಪ ಡಿಲೇ ಆಗಿದೆ. ಇನ್ನೂ ಕೆಲವು ಪಾರ್ಮಲಿಟೀಸ್ ಮಾಡಬೇಕಾಗಿರುವುದರಿಂದ ಲಿಫ್ಟ್ ಇರಿಗೇಷನ್ ಕಾರ್ಪೊರೇಷನ್‌ಇನ್ನೂ ಆಗಿಲ್ಲ. ಅದಾದ ತಕ್ಷಣ ನಾವು ಸಂಪನ್ಮೂಲಗಳನ್ನು ರೂಡಿಸಿಕೊಂಡು ಯಾವುದಕ್ಕೆ ಆದ್ಯತೆ ಯನ್ನು ಕೊಡಬೇಕೋ ಅದಕ್ಕೆ ಆದ್ಯತೆಯನ್ನು ಕೊಟ್ಟು ಪರಿಶೀಲನೆ ಮಾಡುತ್ತೇನೆ.

ಶ್ರೀ ಕೆ.ಪೆಚ್. ಶ್ರೀನಿವಾಸ್.—ಈಗ ಆಯವ್ಯಯದಲ್ಲಿ ಹೇಗಿದ್ದರೂ ಅವಕಾಶ ಮಾಡಿದ್ದೀರಿ. ಲಿಫ್ಟ್ ಇರಿಗೇಷನ್ ಕಾರ್ಪೊರೇಷನ್ ಬರುವ ತನಕ ಕಾಯಬೇಕಾಗಿಲ್ಲ. ನಿಮ್ಮ ಇಲಾಖೆಯ ಮುಖಾಂತರ ಈ ಯೋಜನೆಯನ್ನು ಕಾರ್ಯಗತ ಮಾಡಿಸಬಹುದು. ಬಡ್ಜೆಟ್‌ನಲ್ಲಿ ಸ್ವಲ್ಪ ಸ್ವಲ್ಪವೇ ಹಣ ಸೇರಿಸಿ ಇಷ್ಟರಲ್ಲಿ ಈ ಯೋಜನೆಯನ್ನು ಪೂರ್ತಿ ಗೊಳಿಸಬಹುದಿತ್ತು. ಈ ಯೋಜನೆಯಿಂದ ಜನತೆಗೆ ಅನು ಕೂಲವಾಗುವ ದೃಷ್ಟಿಯಿಂದ ಜನತೆಯಿಂದ ಬೇಕಾದರೆ ತಾವು ಹಣವನ್ನು ಸಂಗ್ರಹಣೆ ಮಾಡಿದರೆ ಅವರು ಸಹಹಣ ಕೊಡುವುದಕ್ಕೆ ತಯಾರಾಗಿದ್ದಾರೆ. ಈ ಹಿಂದೆಲಿಫ್ಟ್ ಇರಿಗೇಷನ್‌ಸೊಸೈಟಿ ಎಂದು ಮಾಡಿದ್ದರು. ಈ ದೃಷ್ಟಿಯಿಂದ ಜನತೆ ಸ್ವಲ್ಪ ಪಾಟ್ಟಿಗೆ ಪಾಲ್ಗೊಳ್ಳುವುದಕ್ಕೆ ಸಾಧ್ಯತೆ ಇದೆ.ಇಂತಹ ಸಂದರ್ಭಗಳು ಇರುವುದರಿಂದ ಮಾನ್ಯ ಮಂತ್ರಿಗಳು ಆದ್ಯತೆಯನ್ನು ಕೊಟ್ಟು ಈ ಯೋಜನೆಯನ್ನು ಪೂರ್ಣ ಗೊಳಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಹೆಚ್.ಡಿ. ದೇವೇಗೌಡ.—ಈ ಸಂದರ್ಭದಲ್ಲಿ ಒಂದು ಆಶ್ವಾಸನೆಯನ್ನು ಕೊಡುವುದಕ್ಕೆ ನಾನು ಇಷ್ಟಪಡುತ್ತೇನೆ. ಮಾನ್ಯ ಸದಸ್ಯರು ಜನರಿಂದ ೨೫ ಪರ್ಸೆಂಟ್‌ನಷ್ಟು ಹಣವನ್ನು ಕೊಡಿಸಿ ಕೊಡುವುದಾದರೆ ನಾನು ಈಗಲೇ ಪ್ರಾರಂಭಿಸುತ್ತೇನೆ.

ಸರ್ಕಾರದ ೩೦೬ನೇ ಹೆಡ್ ಆಫ್ ಅಕೌಂಟ್ ಬಗ್ಗೆ

೧೩೨ (೧೨೨) ಶ್ರೀ ಬಾಬುರೆಡ್ಡಿ ವಿ. ತುಂಗಳ್ (ಬೀಳಗಿ).—ಮಾನ್ಯ ಲೋಕೋಪಯೋಗಿ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ, ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಸರ್ಕಾರದ ೩೦೬ನೇ ಹೆಡ್ ಆಫ್ ಅಕೌಂಟ್ ಮೇರೆಗೆ ಸಣ್ಣ ನೀರಾವರಿ ಅಭಿವೃದ್ಧಿ ಕಾಮಗಾರಿ ೧೯೮೬-೮೭ರಲ್ಲಿ ನೀಡಿದ ಹಣವೆಷ್ಟು ?

ಆ) ಈ ಮೇರೆಗೆ ೩೦-೧೨-೧೯೮೬ಕ್ಕೆ ಕಾಮಗಾರಿಗಳಿಗಾಗಿ ಖರ್ಚು ಮಾಡಿರ ಹಣವೆಷ್ಟು ?

ಇ) ಆ ಪೈಕಿ ಸರ್ಕಾರಿ ಸಿಬ್ಬಂದಿ ವರ್ಗ ಹಾಗೂ ದಿನಗೂಲಿ ಕಾರ್ಮಿಕರ ಸಂಬಳಕ್ಕೆ ಖರ್ಚು ಮಾಡಿದ ಹಣ ಎಷ್ಟು ?

ಈ) ಸಿಬ್ಬಂದಿ ವರ್ಗದವರ ಸಂಬಳವನ್ನು ಕಾಮಗಾರಿ ಕೆಲಸದ ಬಾಬಿಗೆಂದು ಪರಿಗಣಿಸದೆ ಆಯಾ ಸಿಬ್ಬಂದಿ ವರ್ಗದವರ ಸಂಬಳ ಬಾಬಿಗೆ ಖರ್ಚು ಮಾಡಿದ ಪೊತ್ತವೆಂದು ಪರಿಗಣಿಸಲಾಗುವುದೇ?

ಶ್ರೀ ಹೆಚ್.ವಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ)	೩೦೬ (ಯೋಜನೆ)	೧೫.೮೪ ಲಕ್ಷ ರೂ.ಗಳು
	೩೦೬ (ಯೋಜನೇತರ)	೧೧೮೧.೬೫ ಲಕ್ಷ ರೂ.ಗಳು
	ಒಟ್ಟು	೧೧೯೭.೪೯ ಲಕ್ಷ ರೂ.ಗಳು